ರಾಜಣ್ಣನ ಹೆಮ್ಮೆ ಶ್ರೀನಾಥನ ಪ್ರಣಯ ಪುಟ್ಟಣ್ಣನ ನೋಟ
ನೋಡುತ್ತ ನೋಡುತ್ತ ಆರತಿ ಭಾರತಿ ಜಯಂತಿಯರ ತುಂಬಿಕೊಂಡು
ಜಿಕೇವಿಯ ಸಂಗೀತದಲ್ಲಿ ಮುದಗೊಂಡವನು ।

ಫಣಿಯಮ್ಮನ ಕರುಣೆ ಮೂಕಜ್ಜಿಯ ಕನಸು ನಾಗಪ್ಪನ ಬವಣೆ
ಓದುತ್ತ ಶಾರದೆಯ ಬೆನ್ನತ್ತಿ ಸಾಕವ್ವಗೆ ನಮಿಸಿ ಕತೆಯಾದ ಹುಡುಗಿಯ
ಹುಡುಕುತ್ತ ಕರ್ವಾಲೊ ಹಾಗೆ ಅಲೆಯುತಿರುವವನು ।

ಕವಲಿ ನಾಟಕ ಜೇಯೆನ್ನಾರ್ ಪಕ್ಷಿನೋಟ ರಂಗರಾವ್ ವಾರ್ತೆ
ಉಲಿದು ಉಲಿದು ಈರಣ್ಣನ ಮಾತೂ ಮನದ ಮಾತಾಗಿ
ಸವಿನೆನಪ ಬಾನುಲಿಯಲ್ಲಿ ದನಿಯ ಪಡೆದವನು ।

ಪತ್ರಿಕೆಯ ಬೆಳಗು ವಿಶ್ವಕೋಶದ ನೆರಳು ಗಂಗೋತ್ರಿಯ ತಿಳಿವು
ಮರೆಯಲಾಗದ ಮಾಸ್ತರು ತಿದ್ದಿ ತೀಡಿದ ಪರಿಯಲ್ಲಿ
ಒಂದು ನಾಡಿನ ಒಳಗೇ ಹಲವು ಜಗತ್ತು ಕಂಡವನು ।

---

## ಹಾಡಿನ ಮಾತು

ನನ್ನ ಕವಿತೆಯೇ ಹೇಳುವಂತೆ ಎಷ್ಟೊಂದು ಸ್ಫೂರ್ತಿಗಳನ್ನು ಈ ನಾಡು ನನಗುಣಿಸಿದೆ. ಕವಿತೆ ಕಾಲು ಭಾಗ, ಬದುಕು ಪೂರ್ಣ ಭಾಗ, ಕವಿತೆಯಾಗಿಸಲು ಹೆಣಗಿದರೆ ಅದು ಮಹಾಕಾವ್ಯವಾದೀತು.

ಪಂಪನ ಶಿಷ್ಯನಾಗಬೇಕಿತ್ತು, ಕುಮಾರವ್ಯಾಸ ಬರೆಯುವುದನ್ನು ನೋಡಬೇಕಿತ್ತು, ಮದಕರಿಯ ಸೇನೆಯಲ್ಲಿರಬೇಕಿತ್ತು, ಹನ್ನೆರಡನೇ ಶತಮಾನದಲ್ಲಿ ಹುಟ್ಟಬೇಕಿತ್ತು, ಕನಕನ ಜೊತೆ ನಿಂತಿದ್ದರೆ ಕೃಷ್ಣ ನನ್ನನ್ನೂ ನೋಡುತ್ತಿದ್ದನೇನೋ... ಅಥವಾ ಈ ಎಲ್ಲವೂ ಆಗಿ ಆಗಿ ಈಗ ಬರೆಯುತ್ತ ಕೂತಿರುವೆನೇನೋ. ಕರ್ನಾಟಕ ಏಕೀಕರಣದ ಐವತ್ತನೇ ವರ್ಷಾಚರಣೆಗೆ ಆಕಾಶವಾಣಿಯಲ್ಲಿ 'ಸಿರಿಗನ್ನಡಂ ಗೆಲ್ಗೆ' ಶೀರ್ಷಿಕೆಯಲ್ಲಿ ದಿನಕ್ಕೊಂದರಂತೆ ವರ್ಷಪೂರ್ತಿ ಕಾರ್ಯಕ್ರಮ ಮಾಡಿದಾಗ ಹೋದ ಹೋದೆಡೆಯೆಲ್ಲ ಕೇಳುಗರು ಮುತ್ತಿದರು. ನನ್ನ ಕೈಗಳನ್ನು ಹಿಡಿದು ತಲೆಗೊತ್ತಿ ಪುಣ್ಯಕಾರ್ಯವೆಂದರು. ಆ ಗೌರವ ನನಗಲ್ಲ. ಕನ್ನಡ ನಾಡಿಗೆ. ನಾಡು ನಮ್ಮ ಭಾವ ಭಿತ್ತಿಯ ಸಾಕಾರ ಚೈತನ್ಯ. ಆ ಸರಣಿ ನಿರ್ಮಿಸುವ ಮೂಲಕ ನಾನು ನನ್ನ ನಾಡನ್ನು ಮತ್ತೆ ನನ್ನೊಳಗೆ ಪರಿಭಾವಿಸಿಕೊಂಡೆ. ಅಕಾಡೆಮಿಯು ವಿದ್ಯಾರ್ಥಿಗಳಿಗೆ ಪುಸ್ತಕವೊಂದರ ಕುರಿತು ಮಾತನಾಡಲು ಕೇಳಿದಾಗ ಎಷ್ಟೊಂದು ಪುಸ್ತಕಗಳಿದ್ದಾಗಲೂ 'ಕರ್ನಾಟಕ ವಿಷಯ ವಿಶ್ವಕೋಶ'ದ ಬಗ್ಗೆ ಮಾತನಾಡಿದೆ. ದಿನವೂ ಅದರ ಒಂದೊಂದು ಪುಟ ಓದಿದರೆ ಸಾಕು ನಮ್ಮ ನಾಡು ನಮ್ಮೊಳಗಿರುತ್ತದೆ. ಇರಬೇಕು. ಆದರೆ ಅದು ಸಾಧ್ಯವಾದೀತೆ? ನಮ್ಮನ್ನು ಸದಾ ಪೊರೆಯುವ ಎಲ್ಲ ಪೂರ್ವಸೂರಿಗಳಿಗೆ ನನ್ನ ನಮನಗಳು.

✿